

**ಅಮೆರಿಕದಲ್ಲಿ ಶಿಕ್ಷಣ: ಯಾವ ದೇಶ, ಎಷ್ಟು ವಿದ್ಯಾರ್ಥಿಗಳು**

| ದೇಶ | ವಿದ್ಯಾರ್ಥಿಗಳು |
|---|---|
| ಚೀನಾ | 3,28,547 |
| ಭಾರತ | 1,65,918 |
| ಸೌದಿ ಅರೇಬಿಯಾ | 61,287 |
| ದಕ್ಷಿಣ ಕೊರಿಯಾ | 61,007 |
| ಕೆನಡಾ | 26,973 |
| ವಿಯಟ್ನಾಂ | 21,403 |
| ತೈವಾನ್ | 21,127 |
| ಬ್ರೆಜಿಲ್ | 19,370 |
| ಜಪಾನ್ | 19,060 |
| ಮೆಕ್ಸಿಕೊ | 16,733 |

ಆಡಳಿತ ಸೌಧ 'ರೈಸ್ ಹಾಲ್' ಮುಂದೆ ಪ್ರತಿಭಟನೆಯನ್ನೂ ನಡೆಸಿದ್ದರು. ಆಡಳಿತಗಾರರ ಮುಂದೆ ಅವರಿಟ್ಟಿದ್ದು ಒಂದೇ ಬೇಡಿಕೆ: 'ಸುರಕ್ಷಿತವಾಗಿ ಅಧ್ಯಯನ ನಡೆಸಿ, ಸ್ವದೇಶಕ್ಕೆ ವಾಪಸ್ ಆಗುವ ಅವಕಾಶ ಕಲ್ಪಿಸಿ' ಎಂದು. ವೈಟ್ ಹೌಸ್‌ನಿಂದ ಎಂತಹ ಆದೇಶಗಳು ಹೊರಬೀಳಲಿವೆಯೋ ಏನೋ ಎಂಬ ದುಗುಡ ಈಗ ಅವರಲ್ಲಿ ಮನೆಮಾಡಿದೆ.

ಅಮೆರಿಕದ ಎಲ್ಲ ಪ್ರಮುಖ ವಿಶ್ವವಿದ್ಯಾಲಯಗಳ ಅಂತರರಾಷ್ಟ್ರೀಯ ವಿದ್ಯಾರ್ಥಿ ವೇದಿಕೆಗಳೆಲ್ಲ ಸದ್ಯ ತುಂಬಾ ಬ್ಯುಸಿಯಾಗಿವೆ. ಸುರಕ್ಷತೆ ವಿಷಯವಾಗಿ ಆಡಳಿತ ಮಂಡಳಿಗಳು ಹಾಗೂ ವಿದ್ಯಾರ್ಥಿ ಮುಖಂಡರ ನಡುವೆ ದುಂಡುಮೇಜಿನ ಸಭೆಗಳು ನಡೆಯುತ್ತಲೇ ಇವೆ. ವಿಶ್ವವಿದ್ಯಾಲಯಗಳ ಆಡಳಿತಗಾರರು ಎಷ್ಟೇ ಅಭಯ ನೀಡಿದರೂ ದೂರ ತೀರಗಳಿಂದ ಬಂದಿರುವ ಶಿಕ್ಷಣಾರ್ಥಿಗಳ ಕಳವಳ ಕಡಿಮೆಯಾಗಿಲ್ಲ.

ಭಾರತೀಯ ವಿದ್ಯಾರ್ಥಿಗಳ ಪಾಲಿಗೆ ಲಾಗಾಯ್ತಿನಿಂದಲೂ ಅಮೆರಿಕ ನೆಚ್ಚಿನ ತಾಣ. ಅಲ್ಲಿನ ಗುಣಮಟ್ಟದ ಶಿಕ್ಷಣ, ಉತ್ಕೃಷ್ಟ ಸಂಶೋಧನೆ, ಪ್ರಾಯೋಗಿಕವಾಗಿ ಕಲಿಯುವ ಅವಕಾಶಗಳು ಅವರನ್ನು ಸೂಜಿಗಲ್ಲಿನಂತೆ ಸೆಳೆದಿದ್ದವು. ಅಮೆರಿಕದಲ್ಲಿ ಓದಿದವರಿಗೆ ಸುಲಭವಾಗಿ ಉದ್ಯೋಗ ಸಿಗುತ್ತಿದ್ದುದು ಆ ದೇಶದತ್ತ ಭಾರತೀಯ ವಿದ್ಯಾರ್ಥಿಗಳನ್ನು ಆಸೆಗಣ್ಣಿನಿಂದ ನೋಡುವಂತೆ ಮಾಡಿತ್ತು. ಬೇರೆ ದೇಶಗಳ ವಿದ್ಯಾಸಂಸ್ಥೆಗಳಿಗೆ ಹೋಲಿಸಿದರೆ ಅಲ್ಲಿನ ಶೈಕ್ಷಣಿಕ ವೆಚ್ಚ ತುಂಬಾ ದುಬಾರಿ ಎಂಬ ಅಪಸ್ವರ ಕೇಳಿಬಂದರೂ ಬೇಡಿಕೆ ಮಾತ್ರ ಕುಂದಿರಲಿಲ್ಲ. ಬದಲಾಗಿ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಸಾಗಿತ್ತು.  ಕಳೆದ ವರ್ಷವಂತೂ ಆ ದೇಶಕ್ಕೆ ಹಾರುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಏಕಾಏಕಿ ಶೇಕಡಾ 25ರಷ್ಟು ಹೆಚ್ಚಳ ಉಂಟಾಗಿತ್ತು. ಆದರೆ, ಸದ್ಯದ ಪರಿಸ್ಥಿತಿ ಉಲ್ಟಾ ಆಗಿದೆ.

## ಈಗ ಹೇಗಿದೆ ನೀತಿ?

ವಿದ್ಯಾರ್ಥಿಯೊಬ್ಬ ಅಮೆರಿಕದಲ್ಲಿ ಶಿಕ್ಷಣ ಪಡೆಯಲು ಬಯಸಿದರೆ ಮೊದಲು ಆತ ತನ್ನಲ್ಲಿ ಸಾಕಷ್ಟು ಬ್ಯಾಂಕ್ ಬ್ಯಾಲೆನ್ಸ್ ಇರುವ ಕುರಿತು ಅಲ್ಲಿನ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕು. ವಿಶ್ವವಿದ್ಯಾಲಯಗಳಲ್ಲಿ ಪ್ರವೇಶದ ಅರ್ಜಿ ಕೇಳಲು ಹೋದಾಗ ಅಲ್ಲಿನ ಅಧಿಕಾರಿಗಳು ಕೇಳುವ ಮೊದಲ ಪ್ರಶ್ನೆಯೇ 'ನಿಮ್ಮ ಬ್ಯಾಂಕ್ ಬ್ಯಾಲೆನ್ಸ್ ಎಷ್ಟಿದೆ' ಎಂದು. ಅಮೆರಿಕದಲ್ಲಿ ಇರುವಷ್ಟು ಕಾಲ ದೈನಂದಿನ ವೆಚ್ಚಗಳಿಗೆ ಸಾಕಾಗುವಷ್ಟು ಹಣ ಖಾತೆಯಲ್ಲಿದೆ ಎಂದು ಖಚಿತಪಡಿಸಿಕೊಂಡ ಮೇಲೆಯೇ ಪ್ರವೇಶದ ಅರ್ಜಿಗಳನ್ನು ನೀಡಲಾಗುತ್ತದೆ.

ಪಾಲಕರು ಅಥವಾ ಸಂಬಂಧಿಗಳು ಒದಗಿಸಿದ ಹಣ, ಸರ್ಕಾರ ಇಲ್ಲವೆ ಖಾಸಗಿ ಸಂಸ್ಥೆಗಳ ಸಹಾಯಧನ, ಶಿಷ್ಯವೇತನ ಅಥವಾ ಪ್ರಾಯೋಜಕತ್ವದ ಮೂಲಕ ಒದಗಿಬಂದ ನೆರವು –ಹೀಗೆ ಹಣದ ಮೂಲ ಯಾವುದೇ ಆಗಿರಬಹುದು. ವಿಶ್ವವಿದ್ಯಾಲಯಗಳಿಂದ ಅರ್ಜಿ ಪಡೆಯುವಾಗ ದಾಖಲೆ ಒದಗಿಸುವುದು ಕಡ್ಡಾಯ. 'ಬ್ಯಾಂಕ್ ಸ್ಟೇಟ್‌ಮೆಂಟ್' ಸೇರಿದಂತೆ ಹಲವು ದಾಖಲೆಗಳನ್ನು ಆಗ ಕೇಳಲಾಗುತ್ತದೆ.

ವಿಶ್ವವಿದ್ಯಾಲಯಗಳಿಗೆ ಸಲ್ಲಿಸಿದ ದಾಖಲೆಗಳು ತೃಪ್ತಿಕರವಾಗಿ ಕಂಡರೆ ವೀಸಾಕ್ಕೆ ಅಗತ್ಯವಾದ ಪ್ರಮಾಣಪತ್ರವನ್ನು ಅವುಗಳು ವಿತರಿಸುತ್ತವೆ. ಆ



ತಿಯೊಂದರಲ್ಲಿ..